ಶ್ರೀ ಡಿ. ಮಂಜುನಾಥ್ : 424 ಕೇಸುಗಳು ಇಂತಹವು ಇವೆ. ಪ್ರಸ್ತಾವನೆಯನ್ನು ಕಳುಹಿಸಿ ಕೇಂದ್ರಸರ್ಕಾರದಿಂದ ಅನುಮತಿ ಬರುವವರೆಗೆ ನಾವೇನೂ ಮಾಡುವ ಹಾಗೆ ಇಲ್ಲ. ನಮ್ಮ ವ್ಯಾಪ್ತಿಯಲ್ಲಿ ಬರುತ್ತದೋ, ರೆವಿನ್ಯೂ ವ್ಯಾಪ್ತಿಯಲ್ಲಿ ಬರುತ್ತದೋ ಎನ್ನುವುದನ್ನು ಕಂಡುಹಿಡಿಯಲು ಸರ್ವೆ ಮಾಡಿಸಲಿಕ್ಕೆ ನಾನು ಈಗಾಗಲೇ ಸೂಚನೆಯನ್ನು ಕೊಟ್ಟಿದ್ದೇನೆ. ಸರ್ವೆ ಮಾಡಿಸಿದ ಮೇಲೆ ರೆವಿನ್ಯೂ ವ್ಯಾಪ್ತಿಯಲ್ಲಿ ಬರುವುದಾದರೆ ಅದನ್ನು ಮಂಜೂರು ಮಾಡುವುದಕ್ಕೆ ಏನೂ ತೊಂದರೆಯಿಲ್ಲ.

ಶ್ರೀ ಅರಗಜ್ಞಾನೇಂದ್ರ : ಇಲ್ಲಿ ಫಾರೆಸ್ಟ್ ಸರ್ವೇಯರ್ಸ್ ಇಲ್ಲದಿರುವುದರಿಂದ ಇದು ತೊಡಕಾಗಿದೆ. ರೆವಿನ್ಯೂ ಮತ್ತು ಫಾರೆಸ್ಟ್ ಇಲಾಖೆಯ ಸರ್ವೇಯರ್‌ಗಳು ಜಂಟಿ ಸರ್ವೆ ಮಾಡುವ ಪರಿಸ್ಥಿತಿ ಇದೆ. ರೆವಿನ್ಯೂ ಸರ್ವೇಯರ್ಸ್ ನೀವು ಬನ್ನಿ ಅಂದರೆ ಫಾರೆಸ್ಟ್ ಇಲಾಖೆಯಲ್ಲಿ ಸರ್ವೇಯರ್ಸ್ ಇಲ್ಲದಿರುವುದರಿಂದ ಇಂತಹ ಅನಾಹುತಗಳು ನಮ್ಮ ತಾಲ್ಲೂಕಿನಲ್ಲಿ ಸಾಕಷ್ಟು ಆಗುತ್ತಿವೆ. ದಯಮಾಡಿ ಫಾರೆಸ್ಟ್ ಸರ್ವೇಯರ್‌ಗಳನ್ನು ಇಲಾಖೆಗೆ ಒದಗಿಸುತ್ತೀರಾ? ಬಡವರ ಕಾರ್ಯಕ್ರಮವನ್ನು ಅನುಷ್ಠಾನಕ್ಕೆ ತರುವುದಕ್ಕೆ ವ್ಯವಸ್ಥೆ ಮಾಡುತ್ತೀರಾ?

ಶ್ರೀ ಡಿ. ಮಂಜುನಾಥ್ : ಅದನ್ನು ಮಾಡುತ್ತೇನೆಂದು ಹೇಳಿದ್ದೇನೆ, ಮಾಡಿಸುತ್ತೇನೆ. ಸರ್ವೆ ಮಾಡಿಸಿದ ಮೇಲೆ ಅರಣ್ಯ ಜಮೀನು ಅಥವಾ ರೆವಿನ್ಯೂ ಜಮೀನು ಯಾವುದು ಎಂಬುದು ಸ್ಪಷ್ಟವಾಗಿ ತಿಳಿದುಕೊಂಡ ಮೇಲೆ ಅದನ್ನು ಸಾಲ್ವ್ ಮಾಡುವುದಕ್ಕೆ ಆಗುತ್ತದೆ.

ಮೈಸೂರಿನ ಕುಕ್ಕರಹಳ್ಳಿ ಕೆರೆಯನ್ನು ಪ್ರವಾಸಿ ತಾಣವನ್ನಾಗಿ ಪರಿವರ್ತಿಸುವುದು

372 - ಶ್ರೀ ಹೆಚ್.ಎಸ್. ಶಂಕರಲಿಂಗೇಗೌಡ (ಚಾಮರಾಜ) : ಮಾನ್ಯ ಪ್ರವಾಸೋದ್ಯಮ ಕನ್ನಡ ಮತ್ತು ಸಂಸ್ಕೃತಿ ರಾಜ್ಯ ಸಚಿವರು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೆ?

ಅ) *ಮೈಸೂರು ವಿಶ್ವವಿದ್ಯಾನಿಲಯದ ವ್ಯಾಪ್ತಿಯಲ್ಲಿ ಬರುವ ಕುಕ್ಕರಹಳ್ಳಿ ಕೆರೆಯನ್ನು ಅಭಿವೃದ್ಧಿಪಡಿಸಿ ಪ್ರವಾಸಿ ತಾಣವನ್ನಾಗಿ ಪರಿವರ್ತಿಸುವ ಯೋಜನೆ ಏನಾದರೂ ಸರ್ಕಾರಕ್ಕೆ ಇದೆಯೇ?*

ಆ) *ಹಾಗಾದಲ್ಲಿ, ಉದ್ದೇಶಿತ ಅಭಿವೃದ್ಧಿ ಕಾಮಗಾರಿಗಳ ಬಗ್ಗೆ ಹಾಗೂ ಉದ್ದೇಶಿತ ಯೋಜನೆಗಳ ಬಗ್ಗೆ ವಿವರ ನೀಡುವುದು?*

ಶ್ರೀಮತಿ ಲೀಲಾದೇವಿ ಆರ್. ಪ್ರಸಾದ್ (ಪ್ರವಾಸೋದ್ಯಮ ಕನ್ನಡ ಮತ್ತು ಸಂಸ್ಕೃತಿ ರಾಜ್ಯ ಸಚಿವರು) :

ಅ) ಇಲ್ಲ.

ಆ) ಉದ್ಭವಿಸುವುದಿಲ್ಲ.

ಶ್ರೀ ಹೆಚ್.ಎಸ್. ಶಂಕರಲಿಂಗೇಗೌಡ : ಮಾನ್ಯ ಅಧ್ಯಕ್ಷರೆ, "ಸಂಸ್ಕೃತಿ ಅಂದರೆ ಅದು ಹೆಣ್ಣು, ಹೆಣ್ಣು ಅಂದರೆ ಅದು ಮನುಷ್ಯನ ಬಾಳಿನ ಕಣ್ಣು. ತಾವು ಕೊಟ್ಟಿರತಕ್ಕ ಉತ್ತರ ಹೊಟ್ಟೆ ಹುಣ್ಣು" ಎನ್ನುವಂತಹ ಮಟ್ಟಕ್ಕೆ ಆಗಿದೆ. ಏಕೆಂದರೆ ಕುವೆಂಪುರವರು ಕುಕ್ಕರಹಳ್ಳಿ ಕೆರೆಯನ್ನು ಪ್ರವಾಸಿಗರ

ತಂಗುದಾಣವನ್ನಾಗಿ ಮಾಡತಕ್ಕ ಒಂದು ಕನಸನ್ನು ಕಂಡಿದ್ದರು. ಜಲದರ್ಶಿನಿ, ಜಲಸನ್ನಿಧಿ ಎಂದು ಹೇಳಿ ಜೊತೆಗೆ ಅವರ ಪಕ್ಕದಲ್ಲಿಯೇ ಕಲಾ ಮಂದಿರವನ್ನೂ ಸಹ ಕಟ್ಟಿದ್ದಾರೆ. ಕುಕ್ಕರಹಳ್ಳಿ ಕೆರೆಯಲ್ಲಿ ಸುಮಾರು ಎರಡು ಸಾವಿರ ಬೇರೆ ಬೇರೆ ಜಾತಿಯ ಪಕ್ಷಿಗಳು ಅಲ್ಲಿ ನೆಲೆಸಿವೆ. ಪ್ರೇಮಿಗಳು ಅಲೆದಾಡುವ ತಾಣವಾಗಿದೆ. ವೃದ್ಧರಿಗೆ ಆನಂದವನ್ನುಂಟು ಮಾಡತಕ್ಕ ತಾಣವಾಗಿದೆ. ಕುಕ್ಕರಹಳ್ಳಿ ಕೆರೆ ಇವತ್ತು ಮಲಿನವಾಗಿದೆ. ಮೈಸೂರು ನಗರದ ಕೊಳಚೆ ನೀರನ್ನು ಬಿಡುವುದರಿಂದ ನೀರು ಮಲಿನವಾಗಿದೆ. ಮೈಸೂರು ವಿಶ್ವವಿದ್ಯಾನಿಲಯದ ಉಪ ಕುಲಪತಿಗಳು ಇದರ ಬಗ್ಗೆ ಒಂದು ಪತ್ರ ಬರೆದಿದ್ದಾರೆ. ನಮ್ಮ ಸಂಸ್ಕೃತಿಯನ್ನು ಪರಂಪರೆಯನ್ನು ಉಳಿಸಿಕೊಂಡು ಹೋಗಲಿಕ್ಕೆ ಮಾನ್ಯ ಸಿದ್ದರಾಮಯ್ಯನವರು ಕುಕ್ಕರಹಳ್ಳಿ ಕೆರೆಯ ತಾಣವನ್ನು ನೋಡಲಿಕ್ಕೆ ಹೋಗುವಂತಾಗಲು ಮಾನ್ಯ ಸಿದ್ದರಾಮಯ್ಯನವರು ತಮ್ಮ ಸಿದ್ದಹಸ್ತವನ್ನು ಇನ್ನೂ ಇಟ್ಟಿಲ್ಲ; ಕುಕ್ಕರಹಳ್ಳಿ ಕೆರೆಯನ್ನು ಸರಿಪಡಿಸುತ್ತೇವೆ ಎನ್ನುವ ಭರವಸೆ ಬರುವವರೆಗೂ ನಾನು ಧರಣಿ ಮಾಡುತ್ತೇನೆ.

ಶ್ರೀಮತಿ ಲೀಲಾದೇವಿ ಆರ್. ಪ್ರಸಾದ್ : ಮಾನ್ಯ ಅಧ್ಯಕ್ಷರೆ, ನಾನಿನ್ನೂ ಉತ್ತರ ಕೊಡಲೇ ಇಲ್ಲ ಮಾನ್ಯ ಸದಸ್ಯರು, ಈ ನಿರ್ಧಾರ ಮಾಡಿದರೆ ಹೇಗೆ? ನನ್ನ ಉತ್ತರ ಕೇಳಿ ಆಮೇಲೆ ತಮಗೆ ಸಮಾಧಾನ ವಾಗದಿದ್ದರೆ ಹೋಗಿ ಬಾವಿಯಲ್ಲಿ ಬೀಳಿ. ಈಗಲೇ ಬಾವಿಗೆ ಬೀಳಕ್ಕೆ ಹೋಗುವುದು ಬೇಡ.

ಶ್ರೀ ಕೆ.ಎಸ್. ಈಶ್ವರಪ್ಪ : ಸರ್ಕಾರದಿಂದ ಸರಿಯಾದ ಉತ್ತರ ಸಿಗುವುದಿಲ್ಲವೆನ್ನುವಂತಹ ವಿಶ್ವಾಸ ಅವರಿಗೆ ಇದೆ. ಹಾಗಾಗಿ ಬಾವಿಯಲ್ಲಿ ಕೂಡಲಿಕ್ಕೆ ನೇರವಾಗಿ ಹೊರಟರು.

ಶ್ರೀ ಸಿದ್ದರಾಮಯ್ಯ (ಉಪಮುಖ್ಯಮಂತ್ರಿಗಳು) : ನಿಮಗೆ ಅವಿಶ್ವಾಸವಿದ್ದರೆ ಪ್ರಶ್ನೆ ಕೇಳುವುದು ಬೇಡ. ಪ್ರಶ್ನೆ ಏಕೆ ಕೇಳುತ್ತೀರಿ?

ಶ್ರೀಮತಿ ಲೀಲಾದೇವಿ ಆರ್. ಪ್ರಸಾದ್ : ಮಾನ್ಯ ಶಂಕರಲಿಂಗೇಗೌಡರು ಸಂಸ್ಕೃತಿಯ ಬಗ್ಗೆ ಹೊಟ್ಟೆನೋವು ಮಾಡಿಕೊಳ್ಳುವುದು ಬೇಡವೆಂದು ತಮ್ಮ ಮುಖಾಂತರ ಭಿನ್ನಹ ಮಾಡಿಕೊಳ್ಳುತ್ತೇನೆ. ಕೆರೆ ವಿಹಾರಕ್ಕೆ ಹೋಗತಕ್ಕದ್ದು, ಕೆರೆಗಳನ್ನು ಅಭಿವೃದ್ಧಿಪಡಿಸತಕ್ಕದ್ದು ಸಂಪೂರ್ಣವಾಗಿ ಅವರಿಗೂ ಗೊತ್ತಿದೆ, ಈ ಸದನಕ್ಕೂ ಗೊತ್ತಿದೆ, ನನಗೂ ಗೊತ್ತಿದೆ ಎಂದು ಹೇಳುವುದಕ್ಕೆ ಇಚ್ಛಿಪಡುತ್ತೇನೆ. ಕುಕ್ಕರಹಳ್ಳಿ ಕೆರೆ ಅಭಿವೃದ್ಧಿಯನ್ನು ಮಾಡಲಿಕ್ಕೆ ಈಗಾಗಲೇ ನಾವು ಅಲ್ಲಿ ಜಲಕ್ರೀಡಾ ಸಂಕೀರ್ಣವನ್ನು ಮಾಡಲಿಕ್ಕೆ ಸಾಗರೋತ್ತಾರ ಬಂಡವಾಳ ಹೂಡಲಿಕ್ಕೆ ಗ್ಲೋಬಲ್ ಇನ್‌ವೆಸ್ಟ್‌ಮೆಂಟ್ ಕಾನ್ಫರೆನ್ಸ್‌ನಲ್ಲಿ ಈ ವಿಷಯವನ್ನು ತಂದಿದ್ದೆವು. ಆದರೆ ಕೆರೆ ಬಹಳ ಚಿಕ್ಕದಾಗುತ್ತದೆ. ಗ್ಲೋಬಲ್ ಇನ್‌ವೆಸ್ಟ್‌ಮೆಂಟ್‌ನವರು ಇದನ್ನು ಸಂಪೂರ್ಣವಾಗಿ ಅಭಿವೃದ್ಧಿ ಮಾಡುವುದಕ್ಕೆ ಬಹಳ ಚಿಕ್ಕದಾದ ಪ್ರಾಜೆಕ್ಟ್ ಎಂದು ಅಭಿಪ್ರಾಯಪಟ್ಟಿದ್ದಾರೆ. ಇತ್ತೀಚಿನ ನಮ್ಮ ಇಲಾಖೆಯ ಹೊಸ ನೀತಿಯ ಪ್ರಕಾರ ಮಾನ್ಯ ಶಂಕರಲಿಂಗೇಗೌಡರು ಯಾರನ್ನಾದರೂ ಕೆರೆ ಅಭಿವೃದ್ಧಿಪಡಿಸಲಿಕ್ಕೆ ಬಂಡವಾಳ ಹೂಡುವವರನ್ನು ಕರೆದುಕೊಂಡು ಬಂದರೆ ಅವರಿಗೆ 30ಲಕ್ಷ ರೂಪಾಯಿ ಗರಿಷ್ಠ ಸಬ್ಸಿಡಿಯನ್ನು ಕೊಡುವ ವ್ಯವಸ್ಥೆ ಮಾಡಿದ್ದೇವೆ. ಅಂತಹವರು ಯಾರಾದರೂ ಇದ್ದರೆ ಗಮನಕ್ಕೆ ತರಬೇಕೆಂದು ಹೇಳುತ್ತಿದ್ದೇನೆ. ಈಗಾಗಲೇ

ಕೆರೆಯನ್ನು ಅದು ಮೈಸೂರು ವಿಶ್ವವಿದ್ಯಾನಿಲಯದ ವ್ಯಾಪ್ತಿಯಲ್ಲಿ ಬರುವುದರಿಂದ ಕುಕ್ಕರಹಳ್ಳಿ ಕೆರೆಯನ್ನು ಮೈಸೂರು ವಿಶ್ವವಿದ್ಯಾನಿಲಯಕ್ಕೆ ವಹಿಸಿಕೊಟ್ಟಿದ್ದೇವೆ. ನಾಲ್ಕು ಜನ ವಿಹಾರಕ್ಕೆ ಹೋಗಲಿಕ್ಕೆ ಅನುಕೂಲವಾಗುವಂತೆ ಎಫ್‌ಆರ್‌ಸಿ ಪೆಡಲ್ ಬೋಟ್ ಕೊಟ್ಟಿದ್ದೇವೆ. ಜೀವರಕ್ಷಕ ಉಪಕರಣಗಳನ್ನು ಕೊಟ್ಟಿದ್ದೇವೆ. ಎರಡು ಆಸನದ ಚಿಕ್ಕ ಬೋಟನ್ನೂ ಸಹ ಕೊಟ್ಟಿದ್ದೇವೆ. ವಿಶ್ವವಿದ್ಯಾನಿಲಯದವರು ಇದು ಬಹಳ ಸುಂದರವಾದ ಸ್ಥಳ ನಾವು ನಡೆಸಿಕೊಡುತ್ತೇವೆಂದು ಹೇಳಿದ್ದಾರೆ. ಅವರು ಹೇಳಿದಹಾಗೆ ಕೆರೆ ವಿಹಾರಕ್ಕೆ ಹೋದ ತಕ್ಷಣ ಸಂಸ್ಕೃತಿ ಬೆಳೆದುಬಿಡುತ್ತದೆ ಎನ್ನುವುದನ್ನು ನಾನು ಒಪ್ಪುವುದಿಲ್ಲ. ಅದೊಂದು ಮಾದರಿ, ಕೆರೆ ವಿಹಾರಕ್ಕೆ ಹೋಗುವುದು ಒಂದು ಮಾದರಿಯಾದ ಪ್ರವಾಸೋದ್ಯಮದಲ್ಲಿ ಒಂದು ಆಹ್ಲಾದಕರವಾದ ಪ್ರಸಂಗ ಇರುತ್ತದೆ. ಅಭಿವೃದ್ಧಿಪಡಿಸುವವರನ್ನು ಯಾರನ್ನಾದರೂ ಕರೆದುಕೊಂಡು ಬನ್ನಿ. ಅವರಿಗೆ 30ಲಕ್ಷ ರೂಪಾಯಿ ಸಬ್ಸಿಡಿ ಕೊಡುತ್ತೇವೆ ಅದನ್ನು ಅಭಿವೃದ್ಧಿ ಪಡಿಸೋಣ.

ಶ್ರೀ ಹೆಚ್.ಎಸ್. ಶಂಕರಲಿಂಗೇಗೌಡ : 'ಮದುವೆಯಾಗೋ ಗುಂಡ ಅಂದರೆ ನೀನೇ ನನ್ನ ಹೆಂಡತಿ' ಅಂದಹಾಗೆ ಸರ್ಕಾರ ಇರುವುದು ಏಕೆ? ಗುಂಡಾ ಮದುವೆಯಾಗೋ ಅಂದರೆ ನೀನೇ ನನ್ನ ಹೆಂಡತಿ ಎಂದು ಹೇಳುವುದಾದರೆ ಸರ್ಕಾರ ಏಕೆ ನಡೆಸುತ್ತಿದ್ದೀರಿ? ಕುಕ್ಕರಹಳ್ಳಿ ಕೆರೆಯ ಇತಿಹಾಸ ಮತ್ತು ಮಹಿಮೆ ಸ್ವಲ್ಪವಾದರೂ ಅರ್ಥವಾಗಿದೆಯೇ? ಮಂತ್ರಿಗಳು ಯಾರನ್ನಾದರೂ ಕರೆದುಕೊಂಡು ಬನ್ನಿ ಅಂದರೆ ನಾನು ಯಾರನ್ನು ಕರೆದುಕೊಂಡು ಬರಲಿ? ಖೋಡೆಯವರನ್ನು ಕರೆದುಕೊಂಡು ಹೋಗಲಾ? 30ವರ್ಷಗಳಿಂದ ಇದು ನೆನೆಗುದಿಗೆ ಬಿದ್ದಿರತಕ್ಕ ಕುಕ್ಕರಹಳ್ಳಿ ಕೆರೆ ಅಭಿವೃದ್ಧಿ ಮಾಡದೇ ಹೋದರೆ ಖಂಡಿತವಾಗಿಯೂ ನಾನು ಧರಣಿ ಮಾಡಲೇಬೇಕಾಗುತ್ತದೆ. ವಿಧಿಯಿಲ್ಲ ಜನರು ಅಲ್ಲಿ ನಮ್ಮನ್ನು ಬೈಯ್ಯುತ್ತಾರೆ.

ಶ್ರೀಮತಿ ಲೀಲಾದೇವಿ ಆರ್. ಪ್ರಸಾದ್ : ಸರ್ಕಾರ ಯಾವ್ಯಾವ ಸೌಲಭ್ಯಗಳನ್ನು ಕೊಡಬೇಕಾಗಿದೆಯೊ ಅದೆಲ್ಲವನ್ನೂ ಈಗಾಗಲೇ ಕೊಟ್ಟಿದ್ದೇವೆ. ಮರಗಳನ್ನು ಬೆಳಿಸತಕ್ಕ ವಿಚಾರ ಹೇಳಿದ್ದಾರೆ. ಕುಕ್ಕರಹಳ್ಳಿ ಕೆರೆ ಅಭಿವೃದ್ಧಿಪಡಿಸುವುದಕ್ಕೆ ಏನೇನು ಮಾಡಬೇಕೋ ಅದೆಲ್ಲಾ ಮಾಡಿದ್ದೇವೆ. ತಮ್ಮ ಕನಸು ಏನಿದೆ ಏನೇನು ಆಗಬೇಕು ಆ ಪ್ರಾಜೆಕ್ಟನ್ನು ಕೊಡಿ ಅದನ್ನು ಎಷ್ಟರಮಟ್ಟಿಗೆ ಮಾಡಲಿಕ್ಕೆ ಸಾಧ್ಯತೆಯಿದೆ ನೋಡಿಕೊಂಡು ಪರಿಗಣಿಸಲಾಗುವುದು.

ಶ್ರೀ ಹೆಚ್.ಎಸ್. ಶಂಕರಲಿಂಗೇಗೌಡ :-ಅದನ್ನು ಬರೆದುಕೊಡುತ್ತೇನೆ. ಮಾನ್ಯ ಹಣಕಾಸಿನ ಸಚಿವರಾದ ಉಪಮುಖ್ಯಮಂತ್ರಿಗಳು ಸಿದ್ದರಾಮಯ್ಯನವರು ಹಣ ಒದಗಿಸುವುದಕ್ಕೆ ಮುಂದೆ ಬರಬೇಕೆಂದು ಕೇಳಿಕೊಳ್ಳುತ್ತೇನೆ. ಆಶ್ವಾಸನೆ ಬರುವವರೆಗೆ ನಾನು ಧರಣಿ ಮಾಡುತ್ತೇನೆ.

(ಈ ಹಂತದಲ್ಲಿ ಮಾನ್ಯಸದಸ್ಯರಾದ ಶಂಕರಲಿಂಗೇಗೌಡರು ಬಾವಿಯಲ್ಲಿ ಬಂದು ಕುಳಿತರು)

ಶ್ರೀ ವಾಟಾಳ್ ನಾಗರಾಜ್ : ಹಿಂದೆ ಕುಕ್ಕರಹಳ್ಳಿ ಕೆರೆ ಅಂದರೆ ಅಲ್ಲಿ ಅನೇಕರು ಬಿದ್ದರು ಸತ್ತರು ಎನ್ನತಕ್ಕದ್ದು ಇದೆ.

ಶ್ರೀ ಎ. ರಾಮದಾಸ್ : ಕುಕ್ಕರಹಳ್ಳಿ ಕೆರೆ ಒಳ್ಳೆಯ ಪ್ರದೇಶದಲ್ಲಿದೆ. ಅಲ್ಲಿಗೆ ಕೊಳಚೆ ನೀರನ್ನು ತಂದು ಬಿಟ್ಟರು. ಈಗ ಅಲ್ಲಿ ಕೊಳೆತು ನಾರಿ ಪರಿಸರ ಹಾಳಾಗುತ್ತಿದೆ. ಅದು ಅಭಿವೃದ್ಧಿಯಾಗಬೇಕು. ಎರಡನೆಯದು ಅಲ್ಲಿ ಭಗ್ನಪ್ರೇಮಿಗಳು ಬಿದ್ದು ಸಾಯುವ ತಾಣವಾಗುತ್ತಿದೆ. ಆ ದೃಷ್ಟಿಯಿಂದ ತತ್‌ಕ್ಷಣದಲ್ಲಿ ಇದನ್ನು ಪೊಟೆಕ್ಟೆಡ್ ಏರಿಯಾ ಅಂತಲಾದರೂ ಮಾಡಿ ಅದನ್ನು ರಕ್ಷಣೆ ಮಾಡುವಂಥ ಕೆಲಸವನ್ನು ಆದರೂ ತಕ್ಷಣದಲ್ಲಿ ತಾವು ಮಾಡಬೇಕೆಂದು ನಾನು ಕೇಳಿಕೊಳ್ಳುತ್ತೇನೆ.

ಶ್ರೀಮತಿ ಲೀಲಾದೇವಿ ಆರ್. ಪ್ರಸಾದ್ : ಮೈಸೂರು ಅಭಿವೃದ್ಧಿ ಪ್ರಾಧಿಕಾರದವರಿಗೆ, ಕಾರ್ಪೊರೇಷನ್‌ನವರಿಗೆ ಕೊಳಚೆಪ್ರದೇಶದ ನೀರೇನಾದರೂ ಅಲ್ಲಿ ಬರುವುದಾಗಿದ್ದರೆ ಅದನ್ನು ಹೇಗೆ ನಿಲ್ಲಿಸಬೇಕು ಎಂದು ಹೇಳಿಬಿಟ್ಟು ಅವರ ಗಮನಕ್ಕೆ ತರುತ್ತೇನೆ. ಆದರೆ ಮಾನ್ಯ ಶಂಕರಲಿಂಗೇಗೌಡರು ಏನು ಬಾವಿಗೆ ಬಂದಿದ್ದಾರೆ ಇದು ಸರಿಯಲ್ಲ. ಸಂಸ್ಕೃತಿ ಬಗ್ಗೆ ಕಾಳಜಿ ಇರತಕ್ಕಂಥವರು, ವಿಹಾರಿಗಳ ಬಗ್ಗೆ ಕಾಳಜಿ ಇರತಕ್ಕಂಥವರು ಅವರಾಗಿದ್ದಾರೆ. ಇಲ್ಲಿ ಬಾವಿಗೆ ಬಿದ್ದಾಕ್ಷಣಕ್ಕೆ ಕೆರೆಯನ್ನು ಅಭಿವೃದ್ಧಿ ಮಾಡುವುದಕ್ಕೆ ಆಗುವುದಿಲ್ಲ.

ಶ್ರೀ ಸಿದ್ದರಾಮಯ್ಯ : ಶಂಕರಲಿಂಗೇಗೌಡರು ಬಹಳ ಕಳಕಳಿ ಇಟ್ಟುಕೊಂಡು ಅದು ಕುವೆಂಪು ಅವರು ಕನಸು ಕಂಡಿದ್ದರು, ಆ ತರಹ ಒಂದು ತಂಗುದಾಣವಾಗಿ ಪ್ರೇಕ್ಷಕರಿಗೆ ಮಾಡಬೇಕು ಎನ್ನತಕ್ಕಂಥ ಅಭಿಪ್ರಾಯವನ್ನು ಏನು ಇಟ್ಟುಕೊಂಡಿದ್ದಾರೆ, ನಮಗೂ ಕೂಡ ಅದನ್ನು ಅಭಿವೃದ್ಧಿ ಪಡಿಸತಕ್ಕಂಥ ಆಸೆ ಇದೆ. ಅದನ್ನು ಅಭಿವೃದ್ಧಿ ಪಡಿಸುವುದಕ್ಕೆ ಕನ್ನಡ ಮತ್ತು ಸಂಸ್ಕೃತಿ ಇಲಾಖೆ ಮತ್ತು ಯೂನಿವರ್ಸಿಟಿಯವರು ಎಲ್ಲಾ ಒಟ್ಟಾರೆ ಸೇರಿಕೊಂಡು ಆ ಪ್ರಯತ್ನವನ್ನು ಮಾಡುತ್ತೇವೆ.

ಅಧ್ಯಕ್ಷರು : ಆಯ್ತಲ್ಲಪ್ಪ, ಈಗ ಗೊತ್ತಾಯಿತು ನಮಗೆ ನೀವು ಹೊಂದಾಣಿಕೆಯಿಂದ ಮಾಡಿಕೊಳ್ಳುತ್ತೀರಿ ಎಂದು.

ಶ್ರೀ ಜಿ.ವಿ. ಶ್ರೀರಾಮರೆಡ್ಡಿ : ಸಿದ್ಧರಾಮಯ್ಯನವರೇ, ಇದು ಸರಿಯಲ್ಲ. ಅವರ ಕಿವಿಯಲ್ಲಿ ಏನೋ ಹೇಳಿಬಿಟ್ಟು, ರಾಜಿಮಾಡಿಬಿಟ್ಟು ನೀವು ಕಳುಹಿಸುತ್ತಿದ್ದೀರಿ.

(ಮಾನ್ಯ ಸದಸ್ಯರಾದ ಶ್ರೀ ಶಂಕರಲಿಂಗೇಗೌಡ ಅವರು ತಮ್ಮ ಸ್ಥಾನಕ್ಕೆ ಮರಳಿದರು)

ಶ್ರೀ ವಾಟಾಳ್ ನಾಗರಾಜ್ : ಎಲ್ಲಾ ವಿಚಾರದಲ್ಲೂ ನೀವು ಈ ತರಹ ಮಾಡುವುದಲ್ಲ. ಇದೇನಾ ನಿಮ್ಮ ಪಿತೂರಿ? ನಮ್ಮ ನಿಮ್ಮ ಸಂಬಂಧ ಬೇರೆ...

ಶ್ರೀ ಜಿ.ವಿ. ಶ್ರೀರಾಮರೆಡ್ಡಿ : ಅವರ ಕಿವಿಯಲ್ಲಿ ಏನೋ ಹೇಳಿಬಿಟ್ಟು ಮಾಡಿದ್ದಾರೆ.

ಶ್ರೀ ಎಚ್.ಎಸ್. ಶಂಕರಲಿಂಗೇಗೌಡ : ನೀವು ಮಾತಿಗೆ ತಪ್ಪಿ ನಡೆದುಕೊಳ್ಳಬಾರದು. ನೀವು ಮಾತಿಗೆ ತಪ್ಪುವುದಿಲ್ಲ ಎಂಬುದು ನನಗೆ ಗೊತ್ತಿದೆ.

ಶ್ರೀ ಸಿದ್ದರಾಮಯ್ಯ : ಶಂಕರಲಿಂಗೇಗೌಡರೇ, ನಾವೆಲ್ಲಾ ಕುಳಿತು ಚರ್ಚೆ ಮಾಡೋಣ.

ಅಧ್ಯಕ್ಷರು : ರಾಜೇಂದ್ರನ್ ಗೈರುಹಾಜರಿ ಇದ್ದಾರೆ. ನಾನು ಸೆಕೆಂಡ್ ರೌಂಡ್ ಯಾರನ್ನೂ ಕರೆಯುವುದಿಲ್ಲ. ಏಕೆಂದರೆ ಸ್ವಲ್ಪ ಸಮಯ ಇವತ್ತು ಕಳೆದಿದೆ. ಶ್ರೀ ರಾಮರೆಡ್ಡಿಯವರೇ, ನಿಮ್ಮ ಪ್ರಶ್ನೆಗೆ (ಪ್ರಶ್ನೆ ಸಂಖ್ಯೆ : 2386) ಸ್ವಲ್ಪ ಸಮಯ ಕೇಳಿದ್ದಾರೆ.

ಶ್ರೀ ಜಿ.ವಿ. ಶ್ರೀರಾಮರೆಡ್ಡಿ : ಅಧ್ಯಕ್ಷರೇ, ಹದಿನೈದು ದಿವಸ ಟೈಮ್ ಕೇಳಿದರೆ ಸದನ ಮುಗಿದುಹೋಗುತ್ತದೆ.

ಅಧ್ಯಕ್ಷರು : ಏನು ಮಾಡುವುದಕ್ಕೆ ಆಗುತ್ತದೆ? ಅವರು ಸಮಯ ಕೇಳಿದಾಗ ನಾನು ಅವಕಾಶ ಕೊಡಲೇಬೇಕಾಗುತ್ತದೆ. ಈಗ ಪುಟ್ಟಣ್ಣಯ್ಯನವರ ಪ್ರಶ್ನೆ. ಶ್ರೀ ಶ್ರೀರಾಮರೆಡ್ಡಿಯವರೇ ನೀವು ಆ ಪ್ರಶ್ನೆಯನ್ನು ಕೇಳಬಹುದು.

ಮೈಸೂರಿನಲ್ಲಿ ಕುವೆಂಪು ಸ್ಮಾರಕ ಭವನದ ನಿರ್ಮಾಣ

375 - ಶ್ರೀ. ಕೆ.ಎಸ್. ಪುಟ್ಟಣ್ಣಯ್ಯ (ಪಾಂಡವಪುರ) : ಮಾನ್ಯ ಪ್ರವಾಸೋದ್ಯಮ ಹಾಗೂ ಕನ್ನಡ ಮತ್ತು ಸಂಸ್ಕೃತಿ ರಾಜ್ಯ ಸಚಿವೆಯರು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೆ?

ಅ) *ವಿಶ್ವ ಮಾನವ ಸಂದೇಶವನ್ನು ಸಾರಿದ ರಾಷ್ಟ್ರಕವಿ ಕುವೆಂಪುರವರ ಸ್ಮಾರಕ ಭವನವನ್ನು ನಿರ್ಮಾಣ ಮಾಡುವ ಬಗ್ಗೆ ಸರ್ಕಾರದವರು ಪರಿಶೀಲಿಸಿದ್ದಾರೆಯೇ?*

ಆ) *ಹಾಗಿದ್ದಲ್ಲಿ ಇದನ್ನು ಯಾವಾಗ ಮತ್ತು ಎಲ್ಲಿ ನಿರ್ಮಾಣ ಮಾಡಲಾಗುವುದು?*

ಶ್ರೀಮತಿ ಲೀಲಾದೇವಿ ಆರ್. ಪ್ರಸಾದ್ (ಪ್ರವಾಸೋದ್ಯಮ ಹಾಗೂ ಕನ್ನಡ ಮತ್ತು ಸಂಸ್ಕೃತಿ ರಾಜ್ಯ ಸಚಿವೆಯರು) :

ಅ) ಹೌದು.

ಆ) 1992 ರಲ್ಲಿ ಕುವೆಂಪು ಅವರ ಜನ್ಮ ಸ್ಥಳವಾದ ಚಿಕ್ಕಮಗಳೂರು ಜಿಲ್ಲೆ ಹಿರೆಕೊಡಿಗೆಯಲ್ಲಿ ನಿರ್ಮಿಸಲಾಗಿದೆ.

ಶ್ರೀ ಜಿ.ವಿ. ಶ್ರೀರಾಮರೆಡ್ಡಿ : ಅಧ್ಯಕ್ಷರೇ, ಉತ್ತರವನ್ನು ಒದಗಿಸಿದ್ದಾರೆ. ಚಿಕ್ಕಮಗಳೂರು ಜಿಲ್ಲೆಯಲ್ಲಿ ಅವರ ಹುಟ್ಟೂರಿನಲ್ಲಿ ಕುವೆಂಪು ಅವರ ಸ್ಮಾರಕಭವನವನ್ನು 1992ರಲ್ಲಿ ಕಟ್ಟಿದ್ದೇವೆ ಎಂದು ಉತ್ತರ ಕೊಟ್ಟಿದ್ದಾರೆ. ನಮ್ಮ ಪ್ರಶ್ನೆ ಇರತಕ್ಕಂಥಾದ್ದು ಏನೆಂದರೆ, ಕುವೆಂಪು ಅವರನ್ನು ದಯವಿಟ್ಟು ಅಲ್ಲಿಗೇ ಸೀಮಿತ ಮಾಡಬೇಡಿ. ಕುವೆಂಪು ಅವರ ಬಗ್ಗೆ ವಿವರವಾಗಿ ಹೇಳಿ ಭಾಷಣ ಮಾಡಬೇಕಾದ ಅವಶ್ಯಕತೆ ಇಲ್ಲ. ಆದರೆ ಅವರ ಕರ್ಮಭೂಮಿ ಮೈಸೂರು ಆಗಿತ್ತು. ಅವರ ಜೀವನದ ಕೊನೆಯುಸಿರು ಬಿಟ್ಟಿದ್ದು ಮೈಸೂರಿನಲ್ಲಿ. ಹೀಗಾಗಿ ಮೈಸೂರಿನಲ್ಲಿ ಒಂದು ಭವ್ಯವಾದಂಥ ಸ್ಮಾರಕ ಭವನವನ್ನು ಕುವೆಂಪು ಅವರ ಜ್ಞಾಪಕಾರ್ಥವಾಗಿ ಕಟ್ಟಬೇಕು ಎನ್ನತಕ್ಕಂಥಾದ್ದು ನಮ್ಮ ಪ್ರಶ್ನೆಯಾಗಿ ಇರತಕ್ಕಂಥಾದ್ದು. ದಯಮಾಡಿ ಸರ್ಕಾರ ಇದರ ಬಗ್ಗೆ ಏನಾದರೂ ಆಲೋಚನೆ ಮಾಡಿದೆಯೇ? ಮೈಸೂರಿನಲ್ಲಿ ಒಂದು ಭವ್ಯವಾದಂಥ ಸ್ಮಾರಕ ಭವನವನ್ನು ಕುವೆಂಪು ಅವರ